ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೪ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೧೩, ೧೯೧೩

ಬೆಳಿಗ್ಗೆ ೯.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೈಂದೂರಿನಲ್ಲಿರುವ ಸರ್ಕಾರಿ ಪ್ರಥಮ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ತೊಂದರೆಯಾಗಿರುವುದು

2374 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಸರ್ಕಾರ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟಡವಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಟ್ಟಡ ಪೂರ್ಣಗೊಳಿಸಲು ಹಾಗೂ ವಿಸ್ತರಿಸಲು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು ಯಾವ ಕ್ರಮ ಕೈಗೊಳ್ಳಲಾಗುವುದು?

ಇ) ಹೊಸ ನಿವೇಶನಕ್ಕೆ ಮಹಾವಿದ್ಯಾಲಯವನ್ನು ಎಂದಿನಿಂದ ಸ್ಥಳಾಂತರಿಸಲಾಗುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ) ಕಟ್ಟಡದ ನಿರ್ಮಾಣದ ಒಟು ಅಂದಾಜು ವೆಚ್ಚ ರೂ.13.10ಲಕ್ಷಗಳಿಗೆ 1988ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಕಟಡದ ಕೆಲಸವು ಪ್ರಗತಿಯಲ್ಲಿದ್ದು, ದಿನಾಂಕ: 31-3-1991ರ ವರೆಗೆ ರೂ.11.00 ಲಕ್ಷಗಳ ವೆಚ್ಚವಾಗಿದ್ದು, ಕಟ್ಟಡದ ಛಾವಣಿ ಕೆಲಸವು ಮುಗಿದಿದ್ದು ನೆಲಹಾಸು ಕೆಲಸವು ಪ್ರಗತಿಯಲ್ಲಿದೆ.

1991-92ನೇ ಸಾಲಿಗೆ ರೂ. 1.20 ಲಕ್ಷಗಳನ್ನು ಒದಗಿಸಲಾಗಿದೆ. ಕಟ್ಟಡ ಕಾರ್ಯವು ಮುಗಿದ ತಕ್ಷಣವೇ ಕಾಲೇಜನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೇ, ಬೈಂದೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಈಗಿರುವ ಕಟಡ ಸಾಕಾಗದೇ ಇರುವುದರಿಂದ ಕಾಲೇಜನ್ನು ಅಲ್ಲಿಗೆ ಶಿಫ್ಟ್ ಮಾಡಿಲ್ಲ. ಈಗ ಇರುವ ಕಟ್ಟಡಕ್ಕೆ ಫಸ್ಟ್ ಫ್ಲೋರ್ ಹಾಕಬೇಕು ಮತ್ತು ಕೋಣೆಗಳಿಗೆ ಪಾರ್ಟಿಷನ್ ಅವಶ್ಯಕತೆ ಇದೆ. ಇದರ ಜೊತೆಗೆ ಹೆಚ್ಚುವರಿ ಕೋಣೆ ಮತ್ತು ಶೌಚಾಲಯ ವ್ಯವಸ್ಥೆಯನ್ನು ಮಾನ್ಯ ಸಚಿವರೇ ಆ ಜಾಗವನ್ನು ಖುದ್ದಾಗಿ ಕಂಡು ನಾಲ್ಕು ಲಕ್ಷ ರೂಪಾಯಿ ವೆಚ್ಚದಿಂದ ಆದಷು ಬೇಗ ಮಾಡಿಸುತ್ತೇವೆಂದು

ಹೇಳಿದ್ದಾರೆ. ಎಸ್ಟಿಮೇಟ್ ಎಲ್ಲಾ ಈಗ ಮಂಜೂರಾಗಿ ಕಾಲೇಜು ಶಿಕ್ಷಣ ನಿರ್ದೇಶನಾಲಯಕ್ಕೆ ಬಂದಿದೆ. ಇದನ್ನು ಕೂಡಲೇ ಮಂಜೂರಾತಿ ಮಾಡಿಸಿಕೊಡುತ್ತಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಒಂದನೇ ಹಂತದ ಕಟ್ಟಡಕ್ಕೆ 13.01 ಲಕ್ಷ ರೂಪಾಯಿಗಳ ಅಂದಾಜು ಪಟಿ ಇದೆ. ಅದರ ಪ್ರಕಾರ ನಾವು ಈಗಾಗಲೇ ಈ ವರ್ಷ ಅಂದರೆ 1991-92ನೇ ಸಾಲಿಗೆ ಅದನ್ನು ಪೂರ್ತಿ ಮಾಡಿ ಪೂರ್ಣ ಸ್ವರೂಪಕ್ಕೆ ತರುವುದಕ್ಕೆ ಒಂದು ಲಕ್ಷ 20 ಸಾವಿರ ರೂಪಾಯಿಗಳು ಸಾಕು ಎಂದು ಇದ್ದುದ್ದರಿಂದ ಈ ವರ್ಷ ಅದಕ್ಕೆ ಪೂರ್ಣ ಹಣವನ್ನು ಒದಗಿಸಿದ್ದೇವೆ. ಅದು ಪೂರ್ತಿ ಆದ ಮೇಲೆ ಇನ್ನೂ ಒಂದು ಹೆಚ್ಚುವರಿ ಕಟ್ಟಡ ಮಾಡಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆ ಅಂದಾಜು ಪಟ್ಟಿ ತಯಾರಿಸುತ್ತೇವೆ. ಬರುವ ವರ್ಷ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹಿರಿಯ ಸಚಿವರಾಗಿದ್ದೀರಿ, ತಮಗೆ ಗೊತ್ತಿದೆ. ತಾವು ಈ ರೀತಿ ಫಸ್ಟ್ ಗ್ರೇಡ್ ಕಾಲೇಜನ್ನು ಕಟ್ಟುವಂತಹ ಸಂದರ್ಭದಲ್ಲಿ ಮೊದಲ ಮಹಡಿ ಆಗಲಿ, ಕೆಳ ಮಹಡಿ ಆಗಲಿ, ಕಾಲೇಜು ಕಟ್ಟಡ ಕಟ್ಟುವಂತಹ ಉದ್ದೇಶ ಏನು ಅಂದರೆ ಅದು ಇರುವಂತಹ ಕಡೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮೂಡಿಕೊಡಬೇಕು ಎಂದು. 15-20 ಕೊಠಡಿಗಳು ಬೇಕಾಗಿರತಕ್ಕ ಕಡೆಯಲ್ಲಿ 5-6 ಕೊಠಡಿಗಳನ್ನು ಕಟಿದರೆ ತಮ್ಮ ಉದ್ದೇಶ ಸಫಲ ಆಗುವುದಿಲ್ಲ. ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತಂದೆ. ಶಿಕಾರಿಪುರ ತಾಲ್ಲೂಕಿನಲ್ಲಿ 12 ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಡ ಕಟ್ಟಿದ್ದೀರಿ, ಅದು ಪೂರ್ಣ ಆಗಿದೆ. ಆದರೆ ಈಗ 9 ಸೆಕ್ಷನ್ಸ್‌ಗಿರತಕ್ಕ ಪ್ರೈಮರಿ ಶಾಲೆಯಲ್ಲಿ ಕಾಲೇಜು ನಡೆಯುತ್ತಿದೆ. ಮೊದಲ ಮಹಡಿ ಇಲ್ಲದೇ ಇದ್ದರೆ ಕಟ್ಟಡ ಕಟ್ಟಿದರೂ ಸಹ ಅದರ ಉಪಯೋಗ ಆಗುವುದಿಲ್ಲ. ಈ ರೀತಿ ಅನೇಕ ಕಡೆ ಇದೆ. ಅದನ್ನು ಎಕ್ಸಾಮಿನ್ ಮಾಡಿ ಅದು ಉಪಯೋಗ ಆಗುವ ದೃಷ್ಟಿಯಿಂದ ಈ ವರ್ಷ ಕೆಲಸವನ್ನು ಕೈಗೆ ತೆಗೆದುಕೊಂಡರೆ ತಮ್ಮ ಉದ್ದೇಶ ಸಫಲ ಆಗುತ್ತದೆ. ತಮ್ಮಂತಹ ಹಿರಿಯ ಸಚಿವರು ಇದ್ದಾಗಲಾದರೂ ವಿದ್ಯಾರ್ಥಿಗಳಿಗೆ ಉಪಯೋಗ ಆಗಲಿ ಎಂಬ ದೃಷ್ಟಿಯಿಂದ ಹೇಳುತ್ತೀದ್ದೇನೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಕಟ್ಟಡಕ್ಕೆ ಇದು ಉದ್ಭವವಾಗುವುದಿಲ್ಲ. ಏಕೆಂದರೆ, 13 ಲಕ್ಷದ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಈ ಹಂತದಲ್ಲಿ ಈಗ ಸ್ಥಳಾಂತರ ಮಾಡುವುದಕ್ಕೆ ಸಾಧ್ಯ ಇದೆ. ಮುಂದಿನ ಎಕ್ಸ್‌ಪ್ಯಾನ್‌ಷನ್‌ಗೆ ಹೆಚ್ಚಿನ ಅನುಕೂಲತೆಯನ್ನು ತೋರಿಸಲಿಕ್ಕೆ ಮಾತ್ರ ಬೇಕೇ ಹೊರತು ಇದು ಕನಿಷ್ಠ ಅವಶ್ಯಕತೆ ಬಗ್ಗೆ ಪೂರೈಸುವುದಿಲ್ಲ. ಈ ಪ್ರಶ್ನೆ ಬೈಂದೂರು ಕಾಲೇಜಿನ ಬಗ್ಗೆ ಇದೆ. ಮಾನ್ಯ ಯಡಿಯೂರಪ್ಪನವರು ಕೇಳಿದ್ದು ಪ್ರತ್ಯೇಕವಾದ ಪ್ರಶ್ನೆ. ಶಿಕಾರಿಪುರದ ಬಗೆಗಿನ ಪ್ರಶ್ನೆಗಳಿಗೆ ಈಗಲೇ ಉತ್ತರ ಕೊಟ್ಟು ಬಿಡೋಣವೇ?ತಾವು ಅದರ ಬಗ್ಗೆ ಈಗಾಗಲೇ ನನ್ನ ಹತ್ತಿರ ಮಾತನಾಡಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಅನುಮತಿ ಕೊಟ್ಟಿದ್ದು, ಅದು ಶಿಕಾರಿಪುರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು : ಶಿಕಾರಿಪುರ ದಕ್ಷಿಣ ಕನ್ನಡದ ಭಾಗ ಆಯಿತೇ?

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ಏನೂ ಅಡ್ಡಿ ಇಲ್ಲ. ಶಿಕಾರಿಪುರ ದಕ್ಷಿಣ ಕನ್ನಡಕ್ಕೆ ಸೇರಿಸುವುದು ಇದ್ದರೆ, ಅದನ್ನು ಸೇರಿಸಿ ಉತ್ತರ ಕೊಟ್ಟು ಬಿಡೋಣ.

ಅಧ್ಯಕ್ಷರು : ನೀವು ದಕ್ಷಿಣ ಕನ್ನಡದವರು ಯಾವುದನ್ನು ಬೇಕಾದರೂ ಸೇರಿಸಿಕೊಳ್ಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಹೇಳಿದ್ದೀರಿ. ಸಂಪೂರ್ಣ ಕಟ್ಟಡದ ಅವಶ್ಯಕತೆ ಪೂರೈಕೆ ಆಗುವುದಿಲ್ಲ ಎಂದು ತಾವು ಹೇಳಿದ್ದೀರಿ. ನಾನು ಅದಕ್ಕೆ ಅಂದಾಜು ಪಟ್ಟಿ ತಯಾರು ಮಾಡಲಿಕ್ಕೆ ಹೇಳುತ್ತೇನೆ. ಹಣ ಒದಗಿಸಿ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ವಿಶ್ವಾಸದ ಪರವಾಗಿ ಶಿವಮೊಗ್ಗದವರೂ ದಕ್ಷಿಣ ಕನ್ನಡದವರೂ ಒಂದಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಇದಿನಬ್ಬನವರೇ, ನಿಮ್ಮ 415(2171)ನೇ ಪ್ರಶ್ನೆಗೆ 20 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ಅದಕ್ಕೋಸ್ಕರವೇ ಜಾಸ್ತಿ ದಿವಸ ಬೇಕಾಗಿದೆ.

ಶ್ರೀ ಬಿ.ಎಂ. ಇದಿನಬ್ಬ : 20 ದಿವಸಗಳಲ್ಲಿ ನಮ್ಮ ಅಧಿವೇಶನವೇ ಮುಗಿಯುತ್ತದೆ.

ಅಧ್ಯಕ್ಷರು : ಸಾಧಾರಣವಾದ ಪ್ರಶ್ನೆ ಆಗಿದ್ದರೆ ಬೇಗ ಉತ್ತರ ಸಿಗುತ್ತಿತ್ತು. ತಮ್ಮ ಪ್ರಾಮುಖ್ಯವಾದ ಪ್ರಶ್ನೆಗಳಿಗೋಸ್ಕರವಾಗಿ 20 ದಿವಸಗಳು ಬೇಕು.

ಶ್ರೀ ಬಿ.ಎಂ. ಇದಿನಬ್ಬ : ಇದಲ್ಲದೆ, ಮಾನ್ಯ ಗೃಹ ಮಂತ್ರಿಗಳಿಗೆ ಕಳೆದ ಸಾರಿ ಕೊಟ್ಟ ಪ್ರಶ್ನೆ ಕೂಡ ಬಾಕಿ ಉಳಿದಿದೆ.

ಅಧ್ಯಕ್ಷರು : ಅದಕ್ಕೆ ಗ್ರಹ ಬಡಿದಿದೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನ ಪ್ರಶ್ನೆಗಳಿಗೆ ಒಂದು ಜಾತಿ. ಹೀಗೆ ಅವಕಾಶವನ್ನು ಕೇಳುತ್ತಿದ್ದಾರೆ.

ಅಧ್ಯಕ್ಷರು : ಇದು ಒಂದು ಜಾತಿ ಇದೆ; ಇಲ್ಲಿ ನಡೆಯುತ್ತಾ ಉಂಟು.

ಪ್ರತಿ ಮಂಡಲ ಕೇಂದ್ರಕ್ಕೊಂದು ಗ್ರಂಥಾಲಯವನ್ನು ಪ್ರಾರಂಭಿಸುವುದು

2192 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರ ಪ್ರತಿ ಮಂಡಲ ಕೇಂದ್ರಕ್ಕೊಂದು ಗ್ರಂಥಾಲಯ ಪ್ರಾರಂಭಿಸಲು ಈ ಹಿಂದೆ ಯೋಚಿಸಿತ್ತು. ಈ ವರೆಗೆ ಈ ಗ್ರಂಥಾಲಯಗಳನ್ನು ಎಷ್ಟು ಮಂಡಲ ಕೇಂದ್ರಗಳಲ್ಲಿ ಪ್ರಾರಂಭ ಮಾಡಲಾಗಿದೆ.*

ಆ) *ಈ ಮಂಡಲ ಕೇಂದ್ರಗಳ ಮೇಲ್ವಿಚಾರಕರಿಗೆ ನೀಡಲಾಗುತ್ತಿರುವ ಗೌರವ ಧನ ಎಷ್ಟು?*

ಇ) *ಈ ಮೇಲ್ವಿಚಾರಕರ ಕೆಲಸದ ಸಮಯದ ಅವಧಿಯೇನು, ಅವರಿಂದ ಯಾವ ಯಾವ ಕೆಲಸ ಮಾಡಲಾಗುತ್ತಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಈವರೆಗೆ 451 ಮಂಡಲ ಕೇಂದ್ರ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಆ) ಮಾಹೆಯಾನ 300-00 ರೂ.ಗಳು

ಇ) ಬೆಳಿಗ್ಗೆ 8-30 ರಿಂದ 11-30

ಸಂಜೆ 4-00 ರಿಂದ 8-00 ಘಂಟೆಯವರೆಗೆ ಈ ಮೇಲ್ವಿಚಾರಕರು ಮಂಡಲ ಗ್ರಂಥಾಲಯಗಳಲ್ಲಿನ ಗ್ರಂಥಗಳು, ನಿಯತಕಾಲಿಕೆಗಳು ದಿನ ಪ್ರತಿಕೆಗಳು ಇವುಗಳ ಉಸ್ತುವಾರಿ ನಿರ್ವಹಣೆ ಮತ್ತು ಓದುಗರಿಗೆ ಗ್ರಂಥಾಲಯ ಸೇವೆ ನೀಡುವ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ.